**SPL.C. 5047/2025**
ಪ್ರಾ.ಸಾ **:3** ಪ್ರಾ.ಸಾ **:3**

ಮೂರನೇ ಹೆಚ್ಚುವರಿ ಜಿಲ್ಲಾ ಮತ್ತು ಸತ್ರ ನ್ಯಾಯಾಲಯ, ರಾಯಚೂರು ಪೀಠ ಸಿಂಧನೂರು

| | | |
|---|---|---|
| ಸಾಕ್ಷಿಯ ಹೆಸರು | : | ನಾಗೇಂದ್ರ |
| ತಂದೆ ಹೆಸರು | : | ಬಜಾರಪ್ಪ |
| ವಯಸ್ಸು | : | 72 ವರ್ಷ |
| ಉದ್ಯೋಗ | : | -- |
| ವಿಳಾಸ | : | ರಾಯಚೂರು |

ಸಾಕ್ಷಿಗೆ ದಿನಾಂಕ **28-01-2026** ರಂದು ಪ್ರಮಾಣ ವಚನ ಭೋದಿಸಲಾಯಿತು.

<u>ಮುಖ್ಯವಿಚಾರಣೆ **:** ಮಾನ್ಯ ಸರ್ಕಾರಿ ಅಭೀಯೋಜಕರಿಂದ **:**</u>

ನಿ.ಪಿ.1 ಮತ್ತು 2 ರಲ್ಲಿ ನಾನು ರಾಯಚೂರಿನಲ್ಲಿರುವ ಕೆ.ಇ.ಬಿ. ಕಲೋನಿಯಲ್ಲಿ ಸುಮಾರು 4 ವರ್ಷಗಳ ಹಿಂದೆ ಸಹಿ ಮಾಡಿರುತ್ತೇನೆ. ಸಾಕ್ಷಿ ಗುರುತಿಸಿದ ಸಹಿಗಳನ್ನು ನಿ.ಪಿ.1(ಸಿ) ಮ,ತ್ತು 2(ಸಿ) ಎಂದು ಗುರುತಿಸಲಾಯಿತು. ನನಗೆ ಆ ಪಂಚನಾಮೆಗಳಲ್ಲಿ ಬರೆದ ವಿಷಯಗಳು ನೆನಪಿರುವುದಿಲ್ಲ. ನನ್ನನ್ನು ಪೊಲೀಸರು ಬೇರೆ ಯಾವುದೇ ಸ್ಥಳಕ್ಕೆ ಕರೆದುಕೊಂಡು ಹೋಗಿಲ್ಲ. ಪೊಲೀಸರು ನನ್ನ ಸಮ್ಮುಖದಲ್ಲಿ ಯಾವುದೇ ವಸ್ತುಗಳನ್ನು ವಶಕ್ಕೆ ಪಡೆದಿಲ್ಲ.

(ಈ ಹಂತದಲ್ಲಿ ಸಾಕ್ಷಿಯನ್ನು ಪ್ರತಿಕೂಲ ಸಾಕ್ಷಿಯೆಂದು ಪರಿಗಣಿಸಿ ಪಾಟೀ ಸವಾಲು ಮಾಡಲು ವಿಶೇಷ ಸರ್ಕಾರಿ ಅಭಿಯೋಜಕರು ಅನುಮತಿ ಕೇಳಿರುತ್ತಾರೆ. ಸಾಕ್ಷಿಯ ಹೇಳಿಕೆಯನ್ನು ಪರಿಶೀಲಿಸಿ ಪಾಟೀ ಸವಾಲು ಮಾಡಲು ಅನುಮತಿ ನೀಡಲಾಯಿತು.)

<u>ಪಾಟೀ ಸವಾಲು ವಿಶೇಷ ಸರ್ಕಾರಿ ಅಭೀಯೋಜಕರಿಂದ **:**</u>

2. ದಿನಾಂಕ 28-12-2022 ರಂದು ಪೊಲೀಸರು ಮತ್ತು ಜೆಸ್ಕಾಂ ಅಧಿಕಾರಿಗಳು ನನ್ನನ್ನು ಒಳಬಳ್ಳಾರಿಯಲ್ಲಿದ್ದ 1 ನೇ ಆರೋಪಿಯ ಜಮೀನಿಗೆ ಸಾಯಂಕಾಲ 05-30 ಗಂಟೆಗೆ ಕರೆದುಕೊಂಡು ಹೋ ಗಿದ್ದರು ಅಂದರೆ ಸರಿಯಲ್ಲ. ಅಲ್ಲಿ ನಾನು ಒಂದು ಹೆಚ್.ಪಿ. ಪಂಪ್‌ಸೆಟ್ ನೋಡಿದ್ದೇನೆ ಮತ್ತು ಅದಕ್ಕೆ ಅನಧಿಕೃತವಾಗಿ ವಿದ್ಯುತ್ ಸರಬರಾಜು ಪಡೆದಿದ್ದನ್ನು ನೋಡಿದ್ದೇನೆ ಅಂದರೆ ಸರಿಯಲ್ಲ. ನನ್ನ ಸಮ್ಮುಖದಲ್ಲಿ ಮುದ್ದೆಮಾಲು 1 ಇದನ್ನು ಪೊಲೀಸರು ವಶಕ್ಕೆ ಪಡೆದಿದ್ದಾರೆ ಅಂದರೆ ಸರಿಯಲ್ಲ. ನಾನು ಆ ಜಮೀನಿನಲ್ಲಿದ್ದಾಗ, ನಿ.ಪಿ.1 ಮತ್ತು 2 ರಲ್ಲಿ ಸಹಿ ಮಾಡಿದ್ದೇನೆ ಅಂದರೆ ಸರಿಯಲ್ಲ.

3. ನಾನು ಆರೋಪಿತರಿಗೆ ಸಹಾಯ ಮಾಡಲು ಸುಳ್ಳು ಸಾಕ್ಷಿ ಹೇಳುತ್ತಿದ್ದೇನೆ ಅಂದರೆ ಸರಿಯಲ್ಲ.

<u>ಪಾಟೀ ಸವಾಲು**: 1** ಮತ್ತು **2** ನೇ ಆರೋಪಿ ಪರ ವಕೀಲರಿಂದ**:**</u>

(ಆರೋಪಿ ಪರ ವಕೀಲರು ಪಾಟೀ ಸವಾಲು ಇಲ್ಲ ಎಂದು ಹೇಳಿರುತ್ತಾರೆ)

(ನನ್ನ ಉಕ್ತಲೇಖನದಂತೆ ತೆರೆದ ನ್ಯಾಯಾಲಯದಲ್ಲಿ ಬೆರಳಚ್ಚು ಮಾಡಲಾಯಿತು)

ಓ. ಹೇ. ಕೇ. ಸರಿ. ಇದೆ

ಸಹಿ/-

ಮೂರನೇ ಹೆಚ್ಚುವರಿ ಜಿಲ್ಲಾ ಮತ್ತು ಸತ್ರ ನ್ಯಾಯಾಧೀಶರು,
ರಾಯಚೂರು ಪೀಠ ಸಿಂಧನೂರು